# ಎಡ–ಬಲಗಳ ಎಡವಟ್ಟು

■ ಡಾ. ಪ್ರೇಮಲತ ಬಿ.
ಕಲೆ: ತುಮಕೂರು ಸಂಕೇತ್



ಜಯನಗರದ 4ನೇ ಬ್ಲಾಕಿನಲ್ಲಿ ಶಾಪಿಂಗ್ ಮಾಡುತ್ತಿದ್ದೆವು. ನನ್ನೊಡನೆ ಇಬ್ಬರು ಅಕ್ಕಂದಿರು ಬಂದಿದ್ದರು. ತುಮಕೂರಿನಿಂದ ಬೆಂಗಳೂರಿಗೆ ಶಾಪಿಂಗ್ ಅಂತ ಬಂದಿದ್ದ ನಾವು ಸಮಯ ಉಳಿಸಲು ಬೇರೆ ಬೇರೆಯಾಗಿ ವ್ಯಾಪಾರ ಮಾಡದೆ ವಿಧಿಯಿರಲಿಲ್ಲ. ಎಲ್ಲರೂ ಸಂಜೆ ಆರು ಗಂಟೆಗೆ ಒಂದು ಕಡೆ ಸೇರಿ ಮರಳಿ ಹೊರಟುಬಿಡೋಣವೆಂದು ನಿರ್ಧರಿಸಿದೆವು. ಒಂದೆರಡು ರಸ್ತೆಯ ಅಂತರದಲ್ಲೇ ನಮ್ಮ ಅಂಗಡಿಗಳು ಇದ್ದ ಕಾರಣ ಫೋನಾಯಿಸಿಕೊಂಡು ಮರಳಿ ಸೇರಿದರಾಯ್ತು ಅಂತ ನಿರ್ಧರಿಸಿದೆವು. ಆರು ಗಂಟೆಗೆ ಅವರಿಬ್ಬರೂ 'ಬಾಂಬೆ ಡ್ರೈಯಿಂಗ್ ಶಾಪ್ ಮುಂದೆ ನಿಂತಿದ್ದೇವೆ ಬಾ' ಅಂತ ಫೋನಾಯಿಸಿದರು. ನನ್ನ ಎರಡು ಮಕ್ಕಳ ಜೊತೆ ಅವರು ಕೊಟ್ಟ ಡೈರೆಕ್ಷನ್‌ನಲ್ಲಿ ಹೊರಟೆ. ಆದರೆ ಅದೆಲ್ಲಿ ದಾರಿ ತಪ್ಪಿತೋ ಗೊತ್ತಿಲ್ಲ. ಆ ಜನಸಂದಣಿಯಲ್ಲಿ ಹದಿನೈದು ನಿಮಿಷ ನಡೆದರೂ ಆ ಅಂಗಡಿ ಕಾಣಲಿಲ್ಲ. ಮೋರೆ ಸಣ್ಣಗೆ ಮಾಡಿಕೊಂಡು ನಿಂತಿದ್ದ ನನಗೆ ಜೊತೆಯಲ್ಲಿದ್ದ ಮಗ 'ಅದಕ್ಯಾಕೆ ಯೋಚನೆ ಮಾಡ್ತೀಯ, ಫೋನಲ್ಲಿ ಗೂಗಲ್ ಮ್ಯಾಪ್ ಹಾಕಿದರಾಯ್ತು' ಅಂತ ಸಹಾಯಕ್ಕೆ ಮುಂದಾದ. ಅವಾಗಲೇ ಆ ಏರಿಯಾದಲ್ಲಿ ನಾಲ್ಕು ಬಾಂಬೆ ಡ್ರೈಯಿಂಗ್ ಅಂಗಡಿಗಳಿವೆ ಅಂತ ನಮಗೆ ಗೊತ್ತಾಗಿದ್ದು!

'ಈಗ ಎಡಕ್ಕೆ ತಿರುಗು', 'ಈಗ ಬಲಕ್ಕೆ ತಿರುಗು' ಅಂತ ಗೂಗಲ್ ಅಣತಿ ಕೊಟ್ಟ ಹಾಗೆಲ್ಲ ತಿರುಗಿದೆವು. 'ಎಡ', 'ಬಲ' ಅಂದಾಗಲೆಲ್ಲ ನನಗ್ಯಾಕೋ ಒಳಗೊಳಗೇ ಪುಳಕ್ ಪುಳಕ್ ಅನ್ನುತ್ತಿತ್ತು. ಏನೋ ಎಡವಟ್ಟಾಗುತ್ತದೆ ಅಂತ ಆರನೆಯ ಇಂದ್ರಿಯ ಎಚ್ಚರಿಕೆಯ ಗಂಟೆ ಹೊಡೆಯತೊಡಗಿತು. ಪ್ರತಿ ಬಾರಿಯೂ ಗುರಿ ತಲುಪದೆ ಮತ್ತೆಲ್ಲಿಗೋ ಹೋಗಿ ನಿಂತೆವು.

ಇತ್ತೀಚೆಗೆ 'ಎಡ' ಮತ್ತು 'ಬಲ' ಅಂದರೆ ಅರ್ಥ ಏನೆಂದು ನನಗೆ ತಿಳಿಯುತ್ತಿರಲಿಲ್ಲ. ಇನ್ನು ಕಂಪ್ಯೂಟರಿಗೆ ಹೇಗೆ ಅರ್ಥವಾಗಲು ಸಾಧ್ಯ ಅಂತ ನಾನು ಮಗನಿಗೆ ಚೆನ್ನಾಗಿ ಬೈದೆ. ಅವನಿಗೆ ಏನನ್ನಿಸಿತೋ ಅಥವಾ ನಡೆದೂ ನಡೆದೂ ಸುಸ್ತಾಗಿದ್ದಕ್ಕೋ ಏನೋ ಸುಮ್ಮನಾದ. ಎಡದವರು ಸರಿಯೇ? ಬಲದವರು ಸರಿಯೇ? ಅಂತ ವಾದ ಮಾಡಿ ಮಾಡಿ ಸುಸ್ತಾಗಿ, ಸೋಲೊಪ್ಪದೆ, ಗೆಲುವು ಕಾಣದೆ ಮನೆಗೆ ಹೋಗುತ್ತಿದ್ದ ನನ್ನ ಸಹೋದ್ಯೋಗಿಗಳ ನೆನಪಾಯ್ತು. ಈ ಎಡ–ಬಲಗಳ ಅರ್ಥ ಕೆಟ್ಟಿರುವುದರಿಂದಲೇ ನಮ್ಮ ದಾರಿ ತಪ್ಪಿರುವುದು ಅಂತನ್ನಿಸಿ 'ಎಡ' ಮತ್ತು 'ಬಲ' ಅನ್ನುವ ಪದಗಳ ಬಗ್ಗೆ ಭಾರೀ ಕೋಪ ಬಂತು. ಇನ್ನು ಕಂಪ್ಯೂಟರಿನ ಬಗ್ಗೆ ನಂಬಿಕೆ ಹೋಗಿ ಬಹಳ ದಿನಗಳಾಗಿದ್ದವು.

ಹೆಂಗಸರಿಗೆ ದಿಕ್ಕುಗಳ ಬಗ್ಗೆ ಬುದ್ಧಿ ಕಡಿಮೆ ಎಂದು ಎಲ್ಲೋ ಓದಿದ್ದೆ. ಆದರೆ 'ಎಡ' ಮತ್ತು 'ಬಲ' ಎಂದರೇನು ಅಂತ ಚಿಕ್ಕವರಿರುವಾಗ ಶಾಲೆಯಲ್ಲಿ ಚೆನ್ನಾಗಿ ಹೇಳಿಕೊಟ್ಟಿದ್ದರು. ಅದಕ್ಕಿಂತ ಮೊದಲು ಮನೆಯಲ್ಲಿ ಒಂದಷ್ಟು ಪಾಠವಾಗಿತ್ತು. ತೀರ್ಥ–ಪ್ರಸಾದಕ್ಕೆ ಎಡಗೈ ಒಡ್ಡಿದರೆ ಒಲೆಗಿಡುವ ಸೌದೆಗಳಿಂದ ಮೈ ಮೇಲೆ ಬಾಸುಂಡೆಗಳು ಬೀಳುತ್ತಿದ್ದವು. ಬರೆಯಲು ಬಲಗೈಯನ್ನು ಮಾತ್ರ ಬಳಸಬೇಕಿತ್ತು. ಭಾರತದಲ್ಲೇ ಅಲ್ಲ, ಇಂಗ್ಲೆಂಡಿನ ಶಾಲೆಯಲ್ಲಿ ಕೂಡ ಲೊಡ್ಡಗೈನ ಮಕ್ಕಳು ಎಡಗೈಯನ್ನು ಬೆನ್ನ ಹಿಂದೆ ಕಟ್ಟಿ ಬಲಗೈನಲ್ಲಿ ಬರೆಯಲು ಬಿಡುತ್ತಿದ್ದರಂತೆ. ಎಡ ಮಗ್ಗುಲಿನಲ್ಲಿ ಏಳಬಾರದು, ಎಡದ ಕಾಲಲ್ಲಿ ಮಾತಾಡಿಸಬಾರದು, ಎಡದ ಕೈಯಲ್ಲಿ ದಾನ ಹಾಕಬಾರದು, ಎಡಗಾಲು ಮುಂದಿಟ್ಟು ಪ್ರವೇಶ ಮಾಡಬಾರದು ಎಂತೆಲ್ಲ ಕಟ್ಟಳೆಗಳಿರುತ್ತಿದ್ದವು. ಇನ್ನು ಯಾವುದಾದರೂ ಕಾರ್ಯಕ್ಕೆ ಹೊರಟಾಗ ಬೆಕ್ಕು ಅಡ್ಡ ಹಾದು ಹೋಗಬಾರದು, ಹಾಗೂ ಅಡ್ಡ ಹಾದುಹೋದಲ್ಲಿ ಬಲದಿಂದ ಎಡಕ್ಕೆ ಹೋದರೆ ಪರವಾಗಿಲ್ಲ, ಆದರೆ ಎಡದಿಂದ ಬಲಕ್ಕೆ ಹಾದು ಹೋಗಬಾರದು ಎಂತೆಲ್ಲ ಹೇಳುತ್ತಿದ್ದರು. ಯಾರಾದರೂ ತಪ್ಪು ಮಾಡಿದರೆ 'ಏನು, ಇವತ್ತು ಎಡಗಡೆ ಎದ್ದುಬಂದಿದ್ದೀಯ?' ಅಂತ ಗಯ್ಯಾಳಿ ಕ್ಲಾಸ್‌ಲೀಡರ್ ಧಮಕಿ ಹಾಕುತ್ತಿದ್ದಳು. ಹಾಗಾಗಿ 'ಎಡ' ಎಂದರೆ ಕೇಡು ಎನ್ನುವ ಭಾವನೆ ಗೊತ್ತಿಲ್ಲದೆಯೇ ಬೆಳೆದುಬಿಟ್ಟಿತ್ತು. 'ಕಕ್ಕಸು ತೊಳೆಯುವಾಗ ಮಾತ್ರ ಎಡಗೈ ಯಾಕೆ ಬೇಕು?' ಎಂದೇನಾದರೂ ಕೇಳಿದರೆ 'ಬಲಗೈಯಲ್ಲಿ ಉಣ್ಣಬೇಕಲ್ಲ' ಎನ್ನುವ ಉತ್ತರ ದೊರೆಯುತ್ತಿತ್ತು. 'ಉಣ್ಣಲು ಬಲಗೈ ಉಳಿಯಬೇಕಾದರೆ ಎಡಗೈ ಇಲ್ಲದಿದ್ದರೆ ಸಾಧ್ಯವಾ? ಹಾಗಾಗಿ ಎಡ ಎಂದರೆ ಅಷ್ಟೇನೂ ಕೆಟ್ಟದಿರಲು ಸಾಧ್ಯವಿಲ್ಲ' ಅಂತ ನನಗೆ ನಾನೇ ಸಮಾಧಾನ ಮಾಡಿಕೊಂಡಿದ್ದೆ.

> ● 'ಎಡ ಬಲಗಳ ಎಡವಟ್ಟು' ಪ್ರಬಂಧವು, ಇಂದು ದೇಶದೆಲ್ಲೆಡೆ ವ್ಯಾಪಕವಾಗಿ ಚರ್ಚೆಯಾಗುತ್ತಿರುವ ಎಡ–ಬಲದ ಗೊಂದಲವನ್ನು ಲಘು ಶೈಲಿಯಲ್ಲಿ ನಿರೂಪಿಸಿದೆ. ಕಚೇರಿ ಮನೆಯ ದೈನಿಕಗಳಲ್ಲೇ ಅವುಗಳನ್ನು ವ್ಯಂಗ್ಯವಾಗಿ ನೋಡುವ ಈ ಪ್ರಬಂಧ ಎಲ್ಲಿಯೂ ರಾಜಕೀಯಗೊಳ್ಳುವುದಿಲ್ಲ ಎಂಬುದು ವಿಶೇಷ.
>
> – ಜಿ.ಕೆ. ರವೀಂದ್ರಕುಮಾರ್
> ಪ್ರಬಂಧ ಸ್ಪರ್ಧೆ ತೀರ್ಪುಗಾರರು

ಶಾಲೆಯಲ್ಲಿ ಮಾಡುವ ಕವಾಯಿತಿನಲ್ಲಿ ಮಾತ್ರ 'ಬಾಯೇ ಮುಡ್', 'ದಾಯೇ ಮುಡ್' ಅಂತ ಅವರು ಭಾರೀ ಶೋಕಿಯಲ್ಲಿ ಹೇಳುವಾಗ ಎರಡೂ ಕಡೆ ಸಮನಾಗಿ ತಿರುಗಬೇಕಿತ್ತು. ಲೆಫ್ಟ್, ರೈಟ್ ಎಂದು ಹೇಳುವಾಗ ಎರಡೂ ಕೈಗಳನ್ನು ಸಮನಾಗಿ ಬೀಸಬೇಕಿತ್ತು. ಇದೊಂತರ ವಿಚಿತ್ರ ನ್ಯಾಯ ಅಂತ ನನಗೇ ನಾನೇ ಹೇಳಿಕೊಂಡಿದ್ದೆ.

ಹಾಗಾಗಿ ಎಡ ಮತ್ತು ಬಲ ಅಂದರೆ ಏನು ಅಂತ ಚೆನ್ನಾಗಿ ತಿಳಿದಿತ್ತು. ನನಗೆ ಬೇಗ ಮದುವೆಯಾಗಿದ್ದರಿಂದ ಹೈಸ್ಕೂಲಿನಲ್ಲಿದ್ದ ಮಗನಿದ್ದ. ಇನ್ನೊಂದರ್ಥಕ್ಕೆ ನನಗೇನೂ ಅಂತ ವಯಸ್ಸಾಗಿಲ್ಲ ಬಿಡಿ. ಆದರೆ ಇತ್ತೀಚೆಗ್ಯಾಕೋ ನಾನು 'ಔಟ್ ಡೇಟೆಡ್' ಆದಹಾಗೆ ಅನ್ನಿಸುತ್ತಿತ್ತು.

'ಅವನೆಂತ ಗಾಂಪ ನನ್ಮಗ ಅಂದರೆ ಅವನಿಗೆ 'ಎಡ', 'ಬಲ' ಅಂದರೇನು ಅಂತಲೂ ಗೊತ್ತಿಲ್ಲ ಕಣೇ' ಎನ್ನುವ ಜೋಕ್ ಹೇಳುತ್ತಿದ್ದುದು ಕೂಡ ಚೆನ್ನಾಗಿ ನೆನಪಿತ್ತು. ಆದರೆ ದಿನವೂ ಪೇಪರಿನಲ್ಲಿ 'ಎಡದವರು', 'ಬಲದವರು' ಅಂತ ಭಿನ್ನ ಬಣಗಳ ಬಗ್ಗೆ ಬರೆದಿರುತ್ತಿದ್ದರು. ಹಾಗಂದರೆ ಏನು? ಅಂತ ತಲೆ ಕೆರೆದುಕೊಳ್ಳುತ್ತಿದ್ದೆ. ಆದರೆ ನಾನು ಪೇಪರು ಓದುತ್ತಿದ್ದುದು ಬರಿಯ ಕಥೆ, ಕವನ ಮತ್ತು ಸಿನಿಮಾ ವಿಚಾರಗಳನ್ನು ತಿಳಿಯಲು ಮಾತ್ರ. ಆದರೆ ಈ ವಿಭಾಗಗಳಲ್ಲೂ ಇಂತಹ ನಟನಿಗೆ ಎಡಪಂಥೀಯರ ಬೆಂಬಲವಿದೆ, ಮತ್ತೊಬ್ಬರಿಗೆ ಬಲಪಂಥೀಯರಿಂದ ಧಿಕ್ಕಾರ ಸಿಕ್ಕಿತು ಎನ್ನುವ ವಿಚಾರಗಳು ನುಸುಳತೊಡಗಿದ್ದವು.

ಅವತ್ತು ಭಾನುವಾರ. ನವಿರಾದ ಭಾವಗಳ